ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ|| 29, ಸ್ಯ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎರ್ಫೇನ್ಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಬ್ಲಿ ಕೇಟೂದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎರ್ಫೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 277.

ಮೃತಪಟ್ಟ ಬೆಂಗಳೂರು ಅರಳೆಪೇಟೆಗೆ ಸೇರಿದ ಗವಡನಪೇಟೆ ನಾಸಸ್ಥಳಾಗಿದ್ದ ದೇವಾಂಗದ ಪಾಪಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ನಾರೆಪ್ಪನು, ಮೃತಪಟ್ಟ ಸದರೀ ಪಾಪಮ್ಮನಿಗೆ ಸಾಕ್ಷಿಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಗವ್ವಡನ ಪೇಟೆ ಸ್ಥಳದ ನಾರೆಪ್ಪನು, ಬೆಂಗಳೂರು ಗವಡನಪೇಟೆ ವಾಸಸ್ಥಳಾಗಿ ಮೃತಪಟ್ಟ ಪಾಪಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರೆಪ್ಪನ ಅರ್ಜಿಯನ್ನು 1884ನೇ ಇಸವಿ ಡಿಸಂಬರ್ ತಿಂಗಳು ತಾರೀಖು 11ರಲ್ಲು ಕೇಳಿ ಸರಟಿ ಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಪಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ನವಂಬರ್ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಸೆಂಟ್ರಲ್ ಜೈಲ್.

ಇಸ್ತಿಹಾರ್‌ನಾಮಾ.

ತಾರೀಖು 4ನೇ ನವೆಂಬರ್ 1884.

ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಯೂ, ಡಿಸ್ಟ್ರಿಕ್ಟು ಲಾಕಪ್ಪಿನಲ್ಲಿಯೂ, ಖೈದ್ ಮಾಡಲ್ಪಟ್ಟಿರುವ ಖೈದಿಗಳ ಪುಪಯೋಗದ ಬಗ್ಗೆ ಬೇಕಾದ ಆಹಾರ ಪದಾರ್ಥಗಳು ವಗೈರೇ ದರೋಬಸ್ತು ಜಿನಸಿಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಕೊಡಲ್ಪಡುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಸ್ಯ 1884ನೇ ಇಸವಿ ಡಿಸಂಬರ್ 1ನೇ ತಾರೀಖಿನ ವರಿಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು ತೆಗದುಕೊಳ್ಳುವರು.

2. ಮೇಲೆ ಕಂಡ ತಾರೀಖಿಗೆ ತರುವಾಯ ದರಖಾಸ್ತುಗಳು ಯಾವಪ್ರಾ ತೆಗದುಕೊಳ್ಳಲ್ಪಡಲಾರವು.

3. ದರಖಾಸ್ತುಗಳ ಮೇಲೆ "ಸೆಂಟ್ರಲ್ ಜೈಲಿಗೂ, ಡಿಸ್ಟ್ರಿಕ್ಟು ಲಾಕಪ್ಪಿಗೂ ಜಿನಸೀಗಳ ಸರಬರಾಯಿ ಬಗ್ಗೆ ದರಖಾಸ್ತುಗಳು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ನಗದಾಗಿಯಾಗಲಿ ಕರೆನ್ಸಿ ನೋಟುಗಳ ಮೂಲಕವಾಗಿಯಾಗಲಿ, 500 ರೂಪಾಯಿಗಳ ಡಿಪಾಜಿಟ್ ದೇಖಿಲ್ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಮೇಲೆ ಕಂಡ ತಾರೀಖಿನೊಳಗೆ ಅಲ್ಲಿಗೆ ಬರುವದಕ್ಕೆ ಖಾಯಿಷ್ ಮಾಡುವ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ ಈಕೆಳಗೆ ಬರುವ ವಳ್ಳೀಚರಹಾದ ಜಿನಸೀಗಳನ್ನು ರೂಪಾಯಿ 1ಕ್ಕೆ ಕೂಡಿ ತೂಕದ ಪ್ರಕಾರ ಸರಬರಾಯಿ ಮಾಡತಕ್ಕ ದರವನ್ನು ನಮೂದಿಸತಕ್ಕದ್ದು.

ಅಕ್ಕಿ	ಹಸೀ ಅಕ್ಕಿ ವ ಕುದಪಲ ಅಕ್ಕಿ	...		ತರಕಾರಿ
ರಾಗಿ	..	..	..	ಹುರಳಿ
ಬೇಳೆ	..	..	..	ರವೆ
ಅವರೆ	..	..	..	ಸಕ್ಕರೆ
ಮೊಂಸ	..	..	..	ಕಾಫಿ
ಮೊಸರು	..	..	..	ತೆ ಯಲೆ
ಯಳ್ಳೆಂಣೆ	..	..	..	ರೊಟ್ಟಿ
ತುಪ್ಪ	..	..	...	ಹಾಲು
ಹುಣಸೇಹಣ್ಣು	..	..	..	ಬೀಗೆಕಾಯಿ
ಪುಪ್ಪು	..	..	..	ಸಬ್ಬು
ಮಸಾಲೆ ಪುಡಿ	..	..	..	ಗೇರುಬೀಜ
ಈರುಳ್ಳಿ	..	..	..	ಮೆಣಸು
ಬೆಳ್ಳುಳ್ಳಿ	..	..	..	ಮಣಗಿದ ಸಾಮೆ

7. ದರಖಾಸ್ತು ಪಟ್ಟಿಯಲ್ಲಿ ಮೇಲೆನಮೂದಿಸಿದ ಪದಾರ್ಥಗಳಿಗೆ ಮಾತ್ರವಲ್ಲದೆ ದೀಪದ ಯಂಣೆ, ಕೆರೋಜೆರ್ಯ್ ಯಂಣೆ, ಮರಣಿನ ಹರಿವಾಣಗಳು, ಲೋಟುಗಳು, ಪರಿಕೆ ವಗೈರೇ ಪದಾರ್ಥಗಳಿಗೂ ದರಗಳು ನಮೂದಿಸಬೇಕು. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವ ಬಗ್ಗೆ ರಾಗಿಯನ್ನು ಸರಬರಾಯಿ ಮಾಡತಕ್ಕದ್ದು. ಮತ್ತು ಹಿಟ್ಟಾಗಿ ಕೊಡಲ್ಪಡುವದು, ರಾಗಿ ಧಾರಣೆ ಪ್ರಕಾರ ಸರಬರಾಯಿ ಮೊಡಿದ್ದನ್ನು ಹಾಗೆ ಕೊಡಲ್ಪಟ್ಟ ಪರಿಮಾಣದ ಮೇಲೆ ಲೆಕ್ಕ ಮಾಡಿ ಅದರಂತೆ ಬೊಬಲಗು ಪಾವತ್ತೀ ಮಾಡಲ್ಪಡುತ್ತೆ.

8. (ನಾನಾ ಸ್ಕೇಲ್‌ಗಳ ಮೇಲೆ ಯಿರುವ ರೋಜಿನಾ 750 ಮಂದಿ ಖೈದಿಗಳಿಗಾಗಿ) ಈ ಸಂವತ್ಸರಕ್ಕೆ ಬೇಕಾಗಬಹುದಾದ ಮುಖ್ಯ ಪದಾರ್ಥಗಳ ಅಂದಾಜಾ ಇದರಲ್ಲೀ ಕಂಡಂತೆ ಯಿರತಕ್ಕದ್ದು.